O.S.No. 56 /2010 PW - 1

ದಿನಾಂಕ: 25.05.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲುಃ ಪ್ರತಿವಾದಿ 1 ರಿಂದ 4 ನೇ ಪರ ಶ್ರೀ ಪಿ.ಎಸ್.ಆರ್. ವಕೀಲರಿಂದ</u>

ನಾನು ವ್ಯವಸಾಯ ಮಾಡುತ್ತೇನೆ. ವಾದಿ ನಮ್ಮ ಪಕ್ಕದ ನಿವಾಸಿ. 1 ನೇ ಪ್ರತಿವಾದಿ ನನಗೆ ಗೊತ್ತು. 1 ನೇ ಪ್ರತಿವಾದಿಯ ವೈಯಕ್ತಿ ವ್ಯವಹಾರಗಳ ಬಗ್ಗೆ ಗೊತ್ತಿಲ್ಲ. ವಾದಿಯ ಮನೆಗೆ 1 ನೇ ಪ್ರತಿವಾದಿ ಬರುತ್ತಿದ್ದಾಗ ನಾನು ಅವರನ್ನು ನೋಡಿರುತ್ತೇನೆ.

ದಾವಾ ಸ್ವತ್ತಿನ ಸ ನಂ 11/2. 4 ಎಕರೆ 17 ಗುಂಟೆ ವಿಸ್ತೀರ್ಣ ಇರುತ್ತದೆ. ದಾವಾ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಯಾವೆಲ್ಲಾ ಬೆಳೆಗಳು ಬೆಳೆಯುತ್ತಾರೆ ಎಂಬುದು ನನಗೆ ಮಾಹಿತಿ ಇರುವುದಿಲ್ಲ. ವಾದಿಯು ಒಟ್ಟು ಕುಟುಂಬದ ಸ್ವತ್ತಿನಿಂದ ಖರೀದಿ ಮಾಡಿರುತ್ತಾರೆ. 1 ನೇ ಪ್ರತಿವಾದಿ ನಿಂಗಮ್ಮ ಮತ್ತು ಆಕೆಯ ಗಂಡನಿಗೆ ಇರುವಂತಹ ಆಸ್ತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿಗಳು ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳು ಖರೀದಿ ಮಾಡಿದಂತಹ ಸ್ವತ್ತುಗಳು ನನಗೆ ವೈಯಕ್ತಿಕ ಮಾಹಿತಿ ಇರುತ್ತದೆ.

ವಾದಿ ಮತ್ತು ಪ್ರತಿವಾದಿಗಳು ಖರೀದಿ ಮಾಡಿದಂತ ದಿನ ನಾನು ಇರಲಿಲ್ಲ. 1 ನೇ ಪ್ರತಿವಾದಿ ಖರೀದಿ ಮಾಡಿದ ಸಂದರ್ಭದಲ್ಲಿ ಯಾರು ಹಣ ನೀಡಿರುತ್ತಾರೆ ಎಂಬ ಮಾಹಿತಿ ಇರುವುದಿಲ್ಲ. ನೋಂದಣಿಯ ಸಮಯದಲ್ಲಿ ನಾನು ಹಾಜರಿರಲಿಲ್ಲ. ಎಷ್ಟು ಮೌಲ್ಯಕ್ಕೆ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯ ಮಾಹಿತಿಯ ಆಧಾರದ ಮೇರೆಗೆ ನನ್ನ ಪ್ರಮಾಣಪತ್ರವನ್ನು ಬರೆಯಿಸಿರುತ್ತೇನೆ. ವಾದಿಯು 1 ನೇ ಪ್ರತಿವಾದಿಗೆ ರೂ 50 ಸಾವಿರಗಳನ್ನು ನೀಡಿರುವುದಿಲ್ಲ.

ವಾದಿಯು ರೂ 50 ಸಾವಿರಗಳನ್ನು ಪಡೆದು 1 ನೇ ಪ್ರತಿವಾದಿಗೆ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಂಗಮ್ಮರವರಿಗೆ 5 ಜನ ಮಕ್ಕಳು. ಅವರ ಹೆಸರುಗಳು ಗೊತ್ತಿಲ್ಲ. 1 ನೇ ಪ್ರತಿವಾದಿಯು ಖರೀದೀಸಿದಾಗಿನಿಂದ ಅವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ನಿಂಗಮ್ಮಳ ಮಕ್ಕಳು ವಿವಾಹವಾಗಿ ಅವರ ಗಂಡಂದಿರ ಮನೆಗಳಲ್ಲಿ ಇರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಂಗಮ್ಮಳ ಮಕ್ಕಳು ವಿವಾಹವಾದ ನಂತರ ಬೇರೆ ಬೇರೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಕೆಲಸ ಕಾರ್ಯವನ್ನು ಮಾಡಲು 15 ವರ್ಷಗಳ ಹಿಂದೆ ಹೋಗಿದ್ದೆ.

2 ನೇ ಪ್ರತಿವಾದಿ ಸರ್ಕಾರಿ ನೌಕರ ಎಂದರೆ ಸರಿ. ಶಿವರಾಮರವರೇ ನಿಂಗಮ್ಮರವರ ಯೋಗಕ್ಷೆಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸರ್ಕಾರಿ ನೌಕರನಾಗಿದ್ದರಿಂದ 1 ನೇ ಪ್ರತಿವಾದಿಗೆ ಜೀವನಾಂಶಕ್ಕಾಗಿ ಹಣವನ್ನು ಜೀವನೋಪಾಯಕ್ಕೆ ಹಣ ನೀಡುತ್ತಿದ್ದರು ಎಂದರೆ ಸರಿಯಲ್. 1 ನೇ ಪ್ರತಿವಾದಿಯು ಅವರ ಗಂಡನ ಮರಣದ ನಂತರ ಅವರ ಜೀವನೋಪಾಯಕ್ಕಾಗಿ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

ಅವರ ಮಗ 2 ನೇ ಪ್ರತಿವಾದಿಯು ನೀಡಿರುವಂತಹ ಹಣವನ್ನು ಮತ್ತು ಅವರು ಕೂಲಿಯಿಂದ ಸಂಪಾದಿಸಿದ ಹಣವನ್ನು ಶೇಖರಣೆ ಮಾಡಿ ದಾವಾ ಸ್ವತ್ತನ್ನು ಖರೀದಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

1997 ರಂದು 1 ನೇ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಲ್ಪ ಭಾಗವನ್ನು ಖರೀದಿ ಮಾಡಿದ್ದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಯ ದಾವಾ ಸ್ವತ್ತಿನಿಂದ ಬಂದಂತಹ ಆದಾಯದಿಂದ ಇತರ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ನಮ್ಮ ಪಕ್ಕದ ಮನೆಯ ವಾಸಿಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ದಾವಾ ಸ್ವತ್ತನ್ನು ಒಟ್ಟು

ಕುಟುಂಬದ ಸ್ವತ್ತು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ 6ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ